**ಆಯುಕ್ತರು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ನಡವಳಿಗಳು** | 1625

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟಿರುವ ಖಾಸಗಿ **06** ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 190 ಸಿಬ್ಬಂದಿಗಳಿಗೆ 15 ದಿನದ ಗಳಿಕೆ ರಜೆಯ ನಗದೀಕರಣ ಸೌಲಭ್ಯ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಹೆಚ್‌ಪಿಟಿ 2024, ದಿನಾಂಕ:04.04.2024.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಖಜಾನೆ-2), ಆರ್ಥಿಕ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಖ2 /ಪಿ.ಎಂ.ಯು /92 /2015-16 (7), ದಿನಾಂಕ: 24-10 2019.

3) ಸರ್ಕಾರಿ ಆದೇಶ ಸಂಖ್ಯೆ: ಆಇ 10(ಇ) ಸೇನಿಸೇ 2023, ಬೆಂಗಳೂರು, ದಿನಾಂಕ:21.12.2023.

**ಪ್ರಸ್ತಾವನೆ:**

ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಅನುದಾನಿತ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರನ್ನು ಅಧಿಕೃತಗೊಳಿಸಲಾಗಿದೆ.

ಉಲ್ಲೇಖ(2)ರ ಆದೇಶದಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟಿರುವ ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಸಿಬ್ಬಂದಿ ವರ್ಗದವರಿಗೆ ವಾಸ್ತವಿಕವಾಗಿ ಪಾವತಿಸಬೇಕಾಗಿರುವ ವೇತನದ ಸರ್ಕಾರದ ಪಾಲಿನ ಶೇ:85% ರಷ್ಟು ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಪಾವತಿಸುವ ಬಗ್ಗೆ ಆದೇಶವನ್ನು ನೀಡಿರುತ್ತದೆ.

ಉಲ್ಲೇಖ (3) ರ ಸರ್ಕಾರ ಆದೇಶದಲ್ಲಿ 2024 ನೇ ಸಾಲಿನ ಬ್ಲಾಕ್ ಅವಧಿಗೆ ಗರಿಷ್ಠ 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ಎಲ್ಲಾ ವೃಂದದ ಅರ್ಹ ಅಧಿಕಾರಿ/ನೌಕರರಿಗೆ ಜನವರಿ 2024 ರಿಂದ ಡಿಸೆಂಬರ್ 2024 ರವರೆಗಿನ ಅವಧಿಯಲ್ಲಿ ಯಾವುದೇ ತಿಂಗಳಿನಲ್ಲಿ ಗಳಿಕೆ ರಜೆ ನಗದೀಕರಣ ಪಡೆಯುವ ಸೌಲಭ್ಯವನ್ನು ಸರ್ಕಾರದಿಂದ ಸಹಾಯಾನುದಾನ/ಅನುದಾನ ಪಡೆಯುವ ಅಥವಾ ಪಡೆಯದಿರುವ ಕರ್ನಾಟಕ ಸರ್ಕಾರದ ಎಲ್ಲಾ ಸಂಸ್ಥೆಗಳ/ಉದ್ಯಮಗಳ ನೌಕರರಿಗೂ ಸಂಬಂಧಿತ ಸಂಸ್ಥೆ/ಉದ್ಯಮಗಳಿಗೂ ಸಹ ಅನ್ವಯಿಸುತ್ತದೆ ಎಂದು ಆದೇಶಿಸಿರುತ್ತಾರೆ.

ಕೇಂದ್ರ ಕಛೇರಿಯ ಹೆಚ್.ಆರ್.ಎಂ.ಎಸ್ ವಿಭಾಗದವರು ಕಡತ ಸಂ: **DTE-ADMI/11/2024-JD-DEPT TECH EDUCATION (E:1507663)** ರಲ್ಲಿ **06** ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ **190** ಬೋಧಕ/ಬೋಧಕೇತರ ಸಿಬ್ಬಂದಿಗಳ 2024 ನೇ ಸಾಲಿನ 15 ದಿನಗಳ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ಮಂಜೂರು ಮಾಡುವ ಒಟ್ಟು ಮೊತ್ತ **ರೂ.59,16,704/-** ಗಳನ್ನು ಖಜಾನೆ-2 ತಂತ್ರಾಂಶದ ನಮೂನೆಯನ್ನು ಸಲ್ಲಿಸಿರುತ್ತಾರೆ. ಆದುದರಿಂದ **06** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ **190** ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ 15 ದಿನಗಳ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ಮಾಡಬಹುದಾಗಿದೆ.

2024-25 ನೇ ಸಾಲಿಗೆ ಸರ್ಕಾರವು ಒದಗಿಸಿರುವ ಅನುದಾನದಲ್ಲಿ **06** ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು **190** ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ 15 ದಿನಗಳ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ಮಂಜೂರು ಮಾಡುವ ಒಟ್ಟು ಮೊತ್ತ **ರೂ.59,16,704/-** ಗಳನ್ನು 2024-25 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-112-0-07-101 ರಡಿ ಖಜಾನೆ-2 ತಂತ್ರಾಂಶದ ಮುಖಾಂತರ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶ,

**ಕಛೇರಿ ಆದೇಶ ಸಂ: ಡಿಟಿಇ 21 ಜಿಆರ್‌ಟಿ (2) 2024, ಬೆಂಗಳೂರು, ದಿನಾಂಕ: 31-12-2024.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ **06** ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು **190** ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ 15 ದಿನಗಳ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ಮಂಜೂರು ಮಾಡುವ ಸರ್ಕಾರದ ಪಾಲಿನ **ಶೇ.85ರಷ್ಟು** ಒಟ್ಟು ಮೊತ್ತ **ರೂ.59,16,704/- (ರೂಪಾಯಿ ಐವತ್ತೊಂಬತ್ತು ಲಕ್ಷದ ಹದಿನಾರು ಸಾವಿರದ ಏಳು ನೂರು ನಾಲ್ಕು ಮಾತ್ರ)** ಗಳನ್ನು ಖಜಾನೆ-2 ತಂತ್ರಾಂಶದ ಮೂಲಕ 2023-24 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-112-0-07-101 ರಡಿ ಬಿಡುಗಡೆ ಮಾಡಿ ಆದೇಶಿಸಿದ್ದು, ಸದರಿ ಖರ್ಚನ್ನು ಲೆಕ್ಕ ಶೀರ್ಷಿಕೆ 2203-00-112-0-07-101 ರಡಿಯಲ್ಲಿ ಭರಿಸಲುಕೂಡ ಆದೇಶಿಸಲಾಗಿದೆ.

| SL NO | GIA Engineering Colleges | EST NO. | HRMS Bill NO. | No. of employees | Amount |
|---|---|---|---|---|---|
| 1 | The National Institute of Engg Mysuru | 11 | HG2408039228 | 23 | 877131 |
| 2 | B V Bhommareddi College of Engg and Technology Hubli | 2 | HG2410061119 | 1 | 154133 |
| 3 | Malnad college of Engineering Hassan | 4 | HG2410060825 | 38 | 880399 |
| 4 | Dr Ambedkar Institute of Technology Bengaluru | 7 | HG2410060852 | 26 | 949870 |
| 5 | Dr Ambedkar Institute of Technology Bengaluru | 7 | HG2411083298 | 3 | 209458 |
| 6 | SJCE , Mysore | 6 | HG2411083260 | 55 | 1324493 |
| 7 | PDA college of Engg Kalburgi | 5 | HG2411083293 | 44 | 1521220 |
| | | | | **190** | **5916704** |

ಈಗ ಬಿಡುಗಡೆ ಮಾಡಿರುವ 15 ದಿನಗಳ ಗಳಿಕೆ ರಜೆ ಅಧ್ಯರ್ಪಿಸಿ ನಗದೀಕರಣ ಸೌಲಭ್ಯ ಮಂಜೂರು ಮಾಡುವ ಸರ್ಕಾರದ ಪಾಲಿನ **ಶೇ.85ರಷ್ಟು** ಒಟ್ಟು ಮೊತ್ತ **ರೂ.59,16,704/- (ರೂಪಾಯಿ ಐವತ್ತೊಂಬತ್ತು ಲಕ್ಷದ ಹದಿನಾರು ಸಾವಿರದ ಏಳು ನೂರು ನಾಲ್ಕು ಮಾತ್ರ)** ಗಳನ್ನು ಸಿ.ಟಿ.ಎಸ್ 13 ಮೂಲಕ ಖಜಾನೆ-2 ರಲ್ಲಿ ವೆಚ್ಚ ಭರಿಸಲು ಆದೇಶಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳು:-

1) ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಪ್ರಿನ್ಸಿಪಾಲರು ಸಲ್ಲಿಸಿರುವ ಬಿಲ್ಲಿನ ಆಧಾರದ ಮೇಲೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಪರಿಗಣಿಸಲಾಗಿದೆ. ಆದುದರಿಂದ, ಈ ಪಾವತಿಯು ಇಲಾಖೆಯ ಪೂರ್ಣ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.
2) ಆಡಳಿತ ಮಂಡಳಿಯ ಪಾಲಿನ ಶೇ.15ರ ಮೊತ್ತವನ್ನು ಸೇರಿ ಸಂಪೂರ್ಣ ಬಾಕಿ ಮೊತ್ತವನ್ನು ಪಾವತಿಸತಕ್ಕದ್ದು.
3) ಲೆಕ್ಕ ತಪಾಸಣೆಯಲ್ಲಿ ಹೆಚ್ಚುವರಿ ಅನುದಾನವು ಪಾವತಿಯಾಗಿರುವುದು ಕಂಡುಬಂದಲ್ಲಿ, ಆಯಾ ಸಂಸ್ಥೆಗಳಿಂದ ಇಲಾಖೆಯು ನಿರ್ಧರಿಸುವ ರೀತಿಯಲ್ಲಿ ವಸೂಲಿಸಲಾಗುವುದು.
4) ಅನುದಾನವನ್ನು ಉಪಯೋಗಿ ಸಿಕೊಂಡಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ನೀಡುವುದು.
5) ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2203- ತಾಂತ್ರಿಕ ಶಿಕ್ಷಣ -00-112-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ-0-07 ಸರ್ಕಾರೇತರ ತಾಂತ್ರಿಕ ಶಾಲೆಗಳು-101-ಸಹಾಯಾನುದಾನ (2203-00-112-0-07-101) ಅಡಿ 2021-22ರ ಸಾಲಿನ ಆಯವ್ಯಯದಲ್ಲಿ ಭರಿಸತಕ್ಕದ್ದು.

**'ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ'**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**

1. ಆಯುಕ್ತಾಲಯದ ಬಿಎಲ್ಎಸ್ (3) ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ.
2. ಪಟ್ಟಿಯಲ್ಲಿ ಸೂಚಿಸಿರುವ ಅನುದಾನಿತ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಬೆಂಗಳೂರು.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ (ಅ) ಲೆಕ್ಕಾಧಿಕಾರಿಗಳು [ಬಿಲ್ಸ್] (ಆ) ನಗದು ಶಾಖೆ (ಇ) ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನೆನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.